ವಿಶ್ವವಾಣಿ

ಸಂಪಾದಕೀಯ

ಕಠಿಣ ಸಂದೇಶ ರವಾನೆಯಾಗಲಿ

ಬೆಂಗಳೂರಿನ ವೈಟ್‌ಫೀಲ್ಡ್‌ನ ಕಾಡುಗೋಡಿನಲ್ಲಿ ರಸ್ತೆ ಬದಿ ಕಟ್ ಆಗಿ ಬಿದ್ದಿದ್ದ ಕರೆಂಟ್ ತಂತಿ ತುಳಿದು ತಾಯಿ ಮತ್ತು 9 ತಿಂಗಳ ಮಗಳು ಮೃತಪಟ್ಟಿರುವುದು ದುರದೃಷ್ಟಕರ. ಈ ಭಾಗದಲ್ಲಿ ಲೈನ್‌ಟ್ರಿಪ್ ಆಗಿದ್ದು ಬೆಸ್ಕಾಂ ಸಿಬ್ಬಂದಿಯ ಗಮನಕ್ಕೆ ಬಂದಿತ್ತಾದರೂ ಅವರು ನಿರ್ಲಕ್ಷ್ಯ ವಹಿಸಿದ್ದರು. ಟ್ರಿಪ್ ಆಗಿದ್ದ ಲೈನ್ ಚಾರ್ಜ್ ಮಾಡುವ ವೇಳೆ ಮುಂಜಾಗ್ರತೆ ವಹಿಸದೇ ಇದ್ದುದೇ ದುರಂತಕ್ಕೆ ಕಾರಣವಾಗಿದೆ. ಈ ಹಿಂದೆಯೂ ಇಂತಹ ಹಲವು ಪ್ರಕರಣಗಳು ರಾಜ್ಯದಲ್ಲಿ ನಡೆದಿವೆ. 2018-19ರಲ್ಲಿ ವಿದ್ಯುತ್ ತಂತಿ ತಗುಲಿ 11 ಜನ ಮೃತಪಟ್ಟಿದ್ದರೆ, 2019-20ರಲ್ಲಿ 10, 2020-21ರಲ್ಲಿ 9, 2021-22ರಲ್ಲಿ 13, 2022-23ರಲ್ಲಿ 19, 2023ರಲ್ಲಿ 8 ಜನ ಮೃತಪಟ್ಟಿದ್ದಾರೆ. ಕಳೆದ ಐದು ವರ್ಷಗಳಲ್ಲಿ 81 ಜನರಿಗೆ ವಿದ್ಯುತ್ ತಂತಿ ತಗುಲಿದ್ದು, ಇದರಲ್ಲಿ 70 ಮಂದಿ ಮೃತಪಟ್ಟಿದ್ದಾರೆ. ಇವುಗಳಲ್ಲಿ ಆಕಸ್ಮಿಕವಾಗಿ ನಡೆದುದಕ್ಕಿಂತ ಅಧಿಕಾರಿಗಳು, ಸಿಬ್ಬಂದಿಯ ನಿರ್ಲಕ್ಷದಿಂದ ಆಗಿರುವುದೇ ಹೆಚ್ಚು. ಕಳೆದ ವರ್ಷ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ತಂದೆ ಮತ್ತು ಮದುವೆ ನಿಶ್ಚಯವಾಗಿದ್ದ ಮಗಳು ಜೀವ ಕಳೆದುಕೊಂಡಿದ್ದರು. ಆಗಲೂ ಟ್ರಾನ್ಸ್‌ಫಾರ್ಮರ್ ಸುಸ್ಥಿತಿಯಲ್ಲಿ ಇರದಿದ್ದ ಬಗ್ಗೆ ಮೊದಲೇ ಸಾರ್ವಜನಿಕರು ಬೆಸ್ಕಾಂಗೆ ದೂರು ನೀಡಿದ್ದರು. ಆದರೂ ಬೆಸ್ಕಾ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರು. ಭಾನುವಾರ ನಡೆದ ಘಟನೆಯೂ ಇಂತಹದ್ದೇ ನಿರ್ಲಕ್ಷ್ಯದಿಂದಾಗಿದೆ. ಘಟನೆಗೆ ಸಂಬಂಧಿಸಿದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯಕ ಎಂಜಿನಿಯರ್ ಚೇತನ್, ಕಿರಿಯ ಎಂಜಿನಿಯರ್ ರಾಜಣ್ಣ ಹಾಗೂ ಸ್ಟೇಷನ್ ಆಪರೇಟರ್ ಮಂಜುನಾಥ್ ಅವರನ್ನು ಬಂಧಿಸಲಾಗಿದೆ. ಆದರೆ ಸರಕಾರದ ಸಂಬಳ ಪಡೆದು ಈ ರೀತಿ ನಿರ್ಲಕ್ಷ್ಯತನದಿಂದ ಕೆಲಸ ಮಾಡುವ ಮೂಲಕ ಮತ್ತೊಬ್ಬರ ಪ್ರಾಣಕ್ಕೆ ಕುತ್ತಾಗುವ ಇಂತಹವರನ್ನು ಬರೀ ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಪ್ರಯೋಜನವಾಗದು. ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ ಜೈಲು ಶಿಕ್ಷೆ ವಿಧಿಸಬೇಕು. ಕಠಿಣ ಕ್ರಮಗಳನ್ನು ಕೈಗೊಂಡರೆ ಮಾತ್ರ ಬಡಪಾಯಿ ನಾಗರಿಕರು ಹೀಗೆ ಬಲಿಯಾಗುವುದು ತಪ್ಪುತ್ತದೆ. ಅಲ್ಲದೆ, ಬೇಜವಾಬ್ದಾರಿತನದಿಂದ ನೌಕರಿ ಮಾಡಿದರೆ ತಕ್ಕ ಶಿಕ್ಷೆ ತಪ್ಪಿದ್ದಲ್ಲ ಎಂಬ ಸಂದೇಶವೂ ಇತರರಿಗೆ ರವಾನೆಯಾಗುತ್ತದೆ.

ಸೊಂಪಾದಕೀಯ

ಕೋಳಿ ಮೊಟ್ಟೆ, ಕಾಫಿ ಬೀಜ

ಕೊಹ್ಲಿ ಮೊಟ್ಟೆ... ಥೋ, ಇನ್ನೂ ನಾವು ಕ್ರಿಕೆಟ್ ಗುಂಗಿನಿಂದ ಹೊರಗೆ ಬಂದಿಲ್ಲ ನೋಡಿ. ಸಾರಿ, ಕೋಳಿ ಮೊಟ್ಟೆ ರೇಟು ಜಾಸ್ತಿ ಆಗಿರೋದು ಸದ್ಯದ ಮಾರುಕಟ್ಟೆಯ ಸುದ್ದಿ. ಮೊಟ್ಟೆಯ ಬೆಲೆ ಈಗ 7.50 ರುಪಾಯಿಯವರೆಗೂ ಹೋಗಿದೆ. ಆದರೆ ಇದರ ಜತೆಗೆ ಕೋಳಿಯ ರೇಟುಗಳು ಮಾತ್ರ ಕಮ್ಮಿ ಆಗಿರೋದು ವಿಶೇಷ. ಹಂಗೆ ನೋಡಿದ್ರೆ ಇದರಲ್ಲಿ ವಿಶೇಷ ಏನಿಲ್ಲ ಬಿಡಿ. ಮಕ್ಕಳು ದೊಡ್ಡವರಾಗ್ತಾ ಇದ್ದ ಹಾಗೆ ಅವರಿಗೆ ಸಿಗೋ ಬೆಲೆ , ಅಟೆನ್ಶನ್, ಡಿಮ್ಯಾಂಡ್ ಅಪ್ಪ ಅಮ್ಮಗಳಿಗೆ ಇರೋದಿಲ್ಲ ಅನ್ನೋದು ಕಾಮನ್ ವಿಷಯ. ಹಾಗಾಗಿ ಈಗ ಕೋಳಿಗಳಿಗೆ ಡಿಮ್ಯಾಂಡ್ ಕಮ್ಮಿ ಆಗಿದೆ. ಜತೆಗೆ ಮೊಟ್ಟೆ ರೇಟು ಜಾಸ್ತಿ ಆಗ್ತಾ ಇದ್ದ ಹಾಗೆ, ಮೊಟ್ಟೆಯಲ್ಲಿ ಲಾಭ ಇದೆ ಅಂತ ಗೊತ್ತಾದ ಸಾಕಣೆದಾರರು, ಮೊಟ್ಟೆ ಇಡೋ ಕೋಳಿಗಳನ್ನು ಮಾರ್ಕೆಟ್ಟಿಗೆ ಬಿಡುತ್ತಿಲ್ಲ. ಆ ಕೋಳಿಗಳು ನಮ್ಮ ಬಳಿಯೇ ಕೋಳಿ ಫಾರ್ಮ್‌ನಲ್ಲಿಯೇ ಇದ್ದರೆ, ಫಾರ್ಮ್‌ನಲ್ಲಿ' ಇರೋ ಕೋಳಿಗಳಾದರೂ ಒಂದಿಷ್ಟು ಎಕ್ಸ್ಟ್ರಾ ಟೈಂ ಕೇಳಿ ನಡೆಸಿದರೆ ಇನ್ನಷ್ಟು ಹೆಚ್ಚು ಮೊಟ್ಟೆಗಳು ಸಿಗುತ್ತವೆ ಅನ್ನೋದು ಸಾಕಣೆದಾರರ ಲೆಕ್ಕಾಚಾರ. ಇದರಿಂದಾಗಿ ಮಾರುಕಟ್ಟೆಗೆ ಕೋಳಿಗಳನ್ನು ಸಪ್ಲೈ ಮಾಡುತ್ತಿಲ್ಲ ಅಂತ ಕೋಳಿ ಜಗಳ ಶುರು ಆಗದೇ ಇದ್ದರೆ ಸಾಕು. ಕೋಳಿ ಮೊಟ್ಟೆಯ ಜೊತೆ ಸದ್ಯಕ್ಕೆ ಸುದ್ದಿ ಮಾಡ್ತಾ ಇರೋದು ಕಾಫಿ ಬೀಜ. ಕಾಫಿ ಉತ್ಪಾದನೆ ಕಮ್ಮಿ ಆಗಿದ್ದು, ಅದರ ಜತೆಗೆ ಕಾಫಿ ದರಕ್ಕೂ ಹೊಡೆತ ಬೀಳಲಿದೆ ಅನ್ನೋ ಮಾತು ಕೇಳಿಬಂದಿತ್ತು. ಆದರೆ ಈಗ ಕಾಫಿ ರೇಟಿಗೆ ಭಂಗವಿಲ್ಲ ಅಂತ ವರದಿಗಳು ಹೇಳುತ್ತಿವೆ. ಬ್ರೆಜಿಲ್ ಮತ್ತು ವಿಯೆಟ್ನಾಂಗಳಲ್ಲಿ ಕಾಫಿಯ ಬಂಪರ್ ಬೆಳೆ ಬಂದಿರೋದ್ರಿಂದ ಜಾಗತಿಕ ಮಟ್ಟದಲ್ಲಿ ಕಾಫಿ ಬೆಲೆ ಕುಸಿತ ಕಾಣುತ್ತೆ ಅನ್ನೋ ಆತಂಕ ಎಲ್ಲರದ್ದಾಗಿತ್ತು. ಜೊತೆಗೆ ಜಾಗತಿಕವಾಗಿ ಕಾಫಿ ಬಳಕೆ ಕೂಡಾ ಜಾಸ್ತಿ ಆಗಿದೆ ಅನ್ನೋದು ಇನ್ನೊಂದು ಮಾಹಿತಿ. ಒಟ್ಟಿನಲ್ಲಿ ಕಾಫಿ ರೇಟು ಕಮ್ಮಿ ಆಗೋದಿಲ್ಲ, ಹಾಗಾಗಿ ಬೆಳೆಗಾರರು ಜಾಸ್ತಿ ತಲೆಕೆಡಿಸಿಕೊಳ್ಳೋ ಅಗತ್ಯ ಇಲ್ಲ. ಕಾಫಿ ಬೆಲೆ ಕಮ್ಮಿ ಆಯ್ತು ಅಂತ ಚಿಂತೆ ಮಾಡಿದ್ರೆ, ಅದರಿಂದ ತಲೆನೋವು ಬಂದು, ತಾವು ಬೆಳೆದ ಕಾಫಿಯನ್ನು ತಾವೇ ಕಾಯಿಸಿಕೊಂಡು ಕುಡಿಯುವ ಆಪ್ಶನ್ ಕೂಡ ಇರುತ್ತೆ ಅನ್ನೋದು ಸತ್ಯ.

ಸಂಪಾದಕರ ಸದ್ಯಶೋಧನೆ

ಹೆಸರು ಮತ್ತು ಅಡ್ಡಹೆಸರು

ನಾವು ಕನ್ನಡಿಗರು ಮತ್ತು ಭಾರತೀಯರು ಅಡ್ಡಹೆಸರು (nickname) ಕೊಡುವುದರಲ್ಲಿ ನಿಸ್ಸೀಮರು. ಒಂದು ದಿನ ಡಿ.ಕೆ.ಶಿವಕುಮಾರ ಇದ್ದಕ್ಕಿದ್ದಂತೆ 'ಡಿಕೆಶಿ' ಆದರು. ನಂತರ ಅವರು 'ಕನಕಪುರ ಬಂಡೆ' ಆದರು. ಎಲ್ಲರಿಗೂ ಅವರ ಅಪ್ಪ-ಅಮ್ಮಂದಿರು ಹೆಸರಿಟ್ಟರೂ, ಜನ ಅವರಿಗೆ ಬೇರೆ ಹೆಸರಿಡಲು ಬಯಸುತ್ತಾರೆ. ಕೆಲವರು ತಮ್ಮ ನಿಜ ಹೆಸರಿಗಿಂತ, ಬೇರೆಯವರು ಇಟ್ಟ ಅಡ್ಡಹೆಸರಿನಿಂದಲೇ ಪ್ರಸಿದ್ಧರಾಗುತ್ತಾರೆ, ಅದು ಬೇರೆ ಮಾತು. ಪ್ರಸಾದ ಇದ್ದಕ್ಕಿದ್ದಂತೆ ಪಚ್ಚಿ, ಮಹಾಬಲೇಶ್ವರ ಮಾಚ, ನಾಗೇಂದ್ರ ನಾಗ್ಯಾ, ಪ್ರದೀಪ ಪದ್ಯಾ, ಪ್ರಹ್ಲಾದ ಪಲ್ಯಾ ಆಗಿಬಿಡುತ್ತಾರೆ. ಗಣ್ಯರು, ಖ್ಯಾತನಾಮರಿಗೂ ಈ ಅಡ್ಡಹೆಸರು ತಪ್ಪುವುದಿಲ್ಲ. ಕ್ರಿಕೆಟಿಗ ಸುನಿಲ್ ಗವಾಸ್ಕರ್ ಚುಟುಕಾಗಿ ಲಿಟಲ್ ಮಾಸ್ಟರ್ ಆಗುತ್ತಾರೆ ಅಥವಾ ಇನ್ನೂ ಚುಟುಕಾಗಿ 'ಸನ್ನಿ' ಆಗುತ್ತಾರೆ. ವೇಗದ ಬೌಲರ್ ಕಪಿಲ್ ದೇವ್ 'ಹರ್ಯಾಣ ಹರಿಕೇನ್', ಸಚಿನ್ ತೆಂಡೂಲ್ಕರ್ 'ಕ್ರಿಕೆಟಿನ ದೇವರು' ಎಂದು ಕರೆಯಿಸಿಕೊಳ್ಳುತ್ತಾರೆ. ಬ್ಯಾಟ್ಸಮನ್ ರಾಹುಲ್ ದ್ರಾವಿಡ್ ಒಂದು ದಿನ ಯಾರೋ 'ದಿ ವಾಲ್' ಎಂದು ಕರೆದಿದ್ದೇ ತಡ, ಅವರು ಮರುದಿನದಿಂದ 'ಗೋಡೆ'ಯೇ ಆಗಿಬಿಟ್ಟರು. ವಿರಾಟ್ ಕೊಹ್ಲಿಗೆ 'ಕಿಂಗ್', ಮಹೇಂದ್ರ ಸಿಂಗ್ ಧೋನಿಗೆ 'ಕ್ಯಾಪ್ಟನ್ ಕೂಲ್', ರವೀಂದ್ರ ಜಡೇಜಾಗೆ 'ಸರ್ ರವೀಂದ್ರ ಜಡೇಜಾ', ಶಾರ್ದೂಲ್ ಠಾಕೂರ್‌ಗೆ 'ಲಾರ್ಡ್ ಶಾರ್ದೂಲ್ ಠಾಕೂರ್' ಎಂದು ಹೆಸರಿಟ್ಟವರು ಯಾರೋ, ಗೊತ್ತಿಲ್ಲ. ಆದರೆ ಇವರೆಲ್ಲ ಈ ಅಡ್ಡಹೆಸರುಗಳಿಂದಲೇ ಪ್ರಸಿದ್ಧ. ಅಡ್ಡಹೆಸರನ್ನು ಇಡುವುದರಲ್ಲಿ ಪತ್ರಿಕೆಗಳ ಪಾತ್ರವೂ ಇದೆ. ಹಲವು ಸಂದರ್ಭಗಳಲ್ಲಿ ಪತ್ರಿಕೆಗಳೇ ನಾಮಕರಣ ಮಾಡುವುದುಂಟು. ಅದರಲ್ಲೂ ಹೆಡ್ ಲೈನ್ ಬರೆಯುವವರು ಬಹಳ ಸುಲಭವಾಗಿ, ಆದರೆ ಜಗತ್ತಿಗೇ ತಿಳಿಯುವ ಹಾಗೆ ಅಡ್ಡಹೆಸರನ್ನಿಡುವುದರಲ್ಲಿ ನಿಸ್ಸೀಮರು. ಕೆಲವೇ ಪದಗಳಲ್ಲಿ ಹೆಡ್ ಲೈನ್ ಬರೆಯಬೇಕಾಗುತ್ತದೆ. ಕಾರಣ ಜಾಗ ಹೆಚ್ಚಿರುವುದಿಲ್ಲ. ಕೆಲವೊಮ್ಮೆ ಸಾವಿರ ಪದಗಳ ವರದಿ ಅಥವಾ ಲೇಖನಕ್ಕೆ ಮೂರು-ನಾಲ್ಕು ಪದಗಳನ್ನೊಳಗೊಂಡ ಹೆಡ್ ಲೈನ್ ಬರೆಯಬೇಕಾಗುತ್ತದೆ. ಆಗ ಅವರು ಹೆಸರುಗಳನ್ನು ಕಿರಿದುಗೊಳಿಸುವುದು ಅನಿವಾರ್ಯವಾಗುತ್ತದೆ. ಸುಪ್ರೀಂ ಕೋರ್ಟ್ ಇದ್ದಿದ್ದು 'ಸುಪ್ರೀಂ' ಆಗುತ್ತದೆ. ಲೋಕಾಯುಕ್ತ ಇದ್ದಿದ್ದು 'ಲೋಕಾ' ಆಗುತ್ತದೆ. Governor ಪದ Guv ಮತ್ತು Government ಪದ Govt ಆಗುತ್ತದೆ. ಅದರಲ್ಲೂ ಹೆಸರುಗಳು ಬಹುಬೇಗ ಕಿರಿದಾಗುತ್ತವೆ. 'ವಾಟಾಳ್ ನಾಗರಾಜ್' ಎನ್ನುವ ಬದಲು 'ವಾಟಾಳ್' ಎಂದರೆ ಅಷ್ಟು ಜಾಗ ಉಳಿಯಿತು. ಇಂಗ್ಲಿಷ್ ಪತ್ರಿಕೆಗಳ ಹೆಡ್ ಲೈನ್‌ನಲ್ಲಿ ಅಜಿಂಕ್ಯ ರಹಾನೆ ಹೆಸರನ್ನು 'ಜಿಂಕ್ಸ್' ಎಂದೂ, ರವೀಂದ್ರ ಜಡೇಜಾ ಹೆಸರನ್ನು 'ಜಡ್ಡು' ಎಂದೂ, ರವಿಚಂದ್ರನ್ ಅಶ್ವಿನ್ ಹೆಸರನ್ನು 'ಆಶ್' ಎಂದೂ ಬರೆಯುವುದನ್ನು ನೋಡಿದ್ದೇವೆ. ಚೇತೇಶ್ವರ್ ಪೂಜಾರ, ಭುವನೇಶ್ವರ ಕುಮಾರ, ಜಸ್ಪ್ರೀತ್ ಬುಮ್ರಾಹ್, ಯುಜವೇಂದ್ರ ಚಹಲ್, ಶೆಫಾಲಿ ವರ್ಮ, ಸೂರ್ಯ ಕುಮಾರ ಯಾದವ ಅವರು ಅನುಕ್ರಮವಾಗಿ ಪುಜಿ, ಭುವಿ, ಬೂಮ್, ಯುಜಿ, ಶಿಫು, Sky ಆಗಿ ಹೆಡ್ ಲೈನ್‌ಗಳಲ್ಲಿ ಕಂಗೊಳಿಸುವುದನ್ನು ನೋಡಿರಬಹುದು. ಜಾನ್ ಗ್ಲೆನ್ನಿ ಗ್ರೆಗ್ ಎಂಬ ಆಟಗಾರರೊಬ್ಬರಿದ್ದರು. 1871ರಲ್ಲಿ ಅವರು ಭಾರತದಲ್ಲಿ ಹುಟ್ಟಿದ್ದು. ಆದರೆ ಬೆಳೆದಿದ್ದು ಇಂಗ್ಲೆಂಡಿನಲ್ಲಿ. ಬೇಸಿಗೆಯಲ್ಲಿ ಅಲ್ಲಿ ಮತ್ತು ಚಳಿಗಾಲದಲ್ಲಿ ಇಲ್ಲಿ ಅವರು ಕ್ರಿಕೆಟ್ ಆಡುತ್ತಿದ್ದರು. ಕೆಲವು ಅದ್ಭುತ ಇನ್ನಿಂಗ್ ಗಳನ್ನು ಆಡಿದ ಜಾನ್ ಗ್ಲೆನ್ನಿ ಗ್ರೆಗ್ ಅವರ ಹೆಸರನ್ನು ಉಚ್ಚರಿಸಲು ಭಾರತೀಯರು ತಿಣುಕಾಡುತ್ತಿದ್ದರು. ಯಾರೋ ಅವರನ್ನೂ 'ಜಂಗ್ಲಿ ಗ್ರೆಗ್' ಎಂದು ತಮಾಷೆಗೆ ಕರೆದರು. ಅದೇ ಹೆಸರು ಅವರಿಗೆ ಖಾಯಮ್ಮಾಗಿ ಹೋಯಿತು. ಖ್ಯಾತ ಹಾಲಿವುಡ್ ನಟ ಅರ್ನಾಲ್ಡ್ ಶ್ವರ್ಜನೆಗ್ಗರ್ (Schwarzenegger) ಅವರ ಹೆಸರನ್ನು ಉಚ್ಚರಿಸುವುದು ಅಥವಾ ಬರೆಯುವುದು ಯಾರಿಗಾದರೂ ಕಷ್ಟವೇ. ಹೀಗಾಗಿ ಅವರನ್ನು ಅನೇಕರು ಅರ್ನಾಲ್ಡ್ ಎಂದು ಸುಲಭವಾಗಿ ಹೇಳಿ ಬಚಾವ್ ಆಗುವುದುಂಟು. ಪೂರ್ತಿ ಹೆಸರನ್ನು ಹೇಳಿ ಅಂದ್ರೆ, ನಾಲಗೆ ಸುಲಭವಾಗಿ ಹೊರಳುವುದಿಲ್ಲ. ಕನ್ನಡಿಗರು ಅವರ ಹೆಸರನ್ನು ಅರ್ನಾಲ್ಡ್ 'ಶಿವಾಜಿನಗರ' ಎಂದು ಹೇಳಿ ಕೀಟಲೆ ಮಾಡುವುದುಂಟು.

ಸಾಮ್ರಾಟನಾಗುವುದಕ್ಕಿಂತ ಸಂಸದೀಯ ಪಟುವಾಗಲಿ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ranjith.hoskere@gmail.com

ಕರ್ನಾಟಕ ವಿಧಾನಸಭಾ ಚುನಾವಣೆ ಕಳೆದು, ನೂತನ ಸರಕಾರ ಅಧಿಕಾರಕ್ಕೆ ಬಂದು ಆರು ತಿಂಗಳು ಕಳೆಯುವ ಕೆಲವೇ ದಿನಗಳ ಮೊದಲು ರಾಜ್ಯಾಧ್ಯಕ್ಷ ಹಾಗೂ ವಿಧಾನಸಭೆಯ ಪ್ರತಿಪಕ್ಷ ನಾಯಕನ ಆಯ್ಕೆಯ ಪ್ರಕ್ರಿಯೆಗೆ ಬಿಜೆಪಿ ಅಂತ್ಯ ಹಾಡಿದೆ. ಈ ಎರಡೂ ಸ್ಥಾನಗಳಿಗೆ ಹತ್ತಾರು ಹೆಸರುಗಳು ದೊಡ್ಡಮಟ್ಟದಲ್ಲಿ ಕೇಳಿಬಂದರೂ ಕೊನೆಗೆ ಬಿಜೆಪಿ ವರಿಷ್ಠರು 'ಇವರೇ ಸಮರ್ಥರು' ಎನ್ನುವ ಅರ್ಥದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಬಿ.ವೈ. ವಿಜಯೇಂದ್ರ ಅವರನ್ನೂ, ವಿಧಾನಸಭೆ ಪ್ರತಿಪಕ್ಷ ನಾಯಕನ ಸ್ಥಾನಕ್ಕೆ ಆರ್. ಅಶೋಕ್ ಅವರನ್ನು ನೇಮಿಸಿ ಕೈಬಿಟ್ಟಿದೆ. ಈ ಎರಡೂ ನೇಮಕದ ಬಗ್ಗೆ ಪಕ್ಷದಲ್ಲಿ ಒಪ್ಪಿಗೆಗಿಂತ 'ಅಸಮಾಧಾನ'ವೇ ಹೆಚ್ಚಾಗಿ ಸದ್ಯಕ್ಕೆ ಕಾಣುತ್ತಿರುವುದು ಸ್ಪಷ್ಟ.

ನಿಜವಾಗಿ ಹೇಳಬೇಕೆಂದರೆ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಪ್ರತಿಪಕ್ಷ ನಾಯಕನ ಸ್ಥಾನಕ್ಕೆ ಆಗಿರುವ ಆಯ್ಕೆಗಳು ಪೂರ್ಣಗೊಂಡು ತಿಂಗಳುಗಳೇ ಕಳೆಯಬೇಕಿತ್ತು. ಈ ವೇಳೆ ಈ ಇಬ್ಬರೂ ರಾಜ್ಯವನ್ನು ಒಂದು ಸುತ್ತಿ ಬರಬೇಕಿತ್ತು. ಆದರೆ ಚುನಾವಣೆಯಲ್ಲಿನ ಬಿಜೆಪಿ ಹೀನಾಯ ಸೋಲು, ಕಳೆದ ಮೂರು ವರ್ಷದಲ್ಲಿ ಸರಿಪಡಿಸಿಕೊಳ್ಳಲು ಸಾಧ್ಯವಾಗದಷ್ಟು ಮಟ್ಟಿಗೆ ಕೆಳಗೆ ಬಿದ್ದಿರುವ ಪಕ್ಷದ ಸಂಘಟನೆ ಹಾಗೂ ರಾಜ್ಯ ಮಟ್ಟದ ನಾಯಕರಲ್ಲಿನ ಪ್ರತಿಷ್ಠೆಯ ಸಮಸ್ಯೆಯಿಂದ ಪ್ರಕ್ರಿಯೆ ಆರು ತಿಂಗಳು ಎಳೆದಿದೆ ಎನ್ನುವುದು ಸ್ಪಷ್ಟ. ಒಂದು ವೇಳೆ ಬೆಳಗಾವಿ ಅಧಿವೇಶನ ಡಿಸೆಂಬರ್‌ನಲ್ಲಿ ಆರಂಭವಾಗದಿದ್ದರೆ, ಅಥವಾ ಹಲವು ಶಾಸಕರು ಪ್ರತಿಪಕ್ಷ ನಾಯಕನ ನೇಮಕದ ಹೊರತು ಸದನಕ್ಕೆ ಹೋಗುವುದಿಲ್ಲ ಎನ್ನುವ ಸಂದೇಶವನ್ನು ವರಿಷ್ಠರಿಗೆ ರವಾನಿಸದಿದ್ದರೆ ಇನ್ನಷ್ಟು ತಿಂಗಳು ಈ ಎರಡೂ ಖುರ್ಚಿಗಳು ಖಾಲಿ ಹೊಡೆಯಬೇಕಿತ್ತು.

ಈ ಎಲ್ಲ ಪ್ರಹಸನ ಪೂರ್ಣಗೊಳ್ಳಲು ಯಡಿಯೂರಪ್ಪ ಅವರ ಒತ್ತಡ, ಮುಂದಿನ ಲೋಕಸಭಾ ಚುನಾವಣೆಯಲ್ಲಿನ ಗೆಲುವಿನ ಅನಿವಾರ್ಯವೇ ಕಾರಣ. ಬಿಜೆಪಿ ವರಿಷ್ಠರು ಪಂಚರಾಜ್ಯ ಚುನಾವಣೆಯ ಬ್ಯುಸಿಯಲ್ಲಿಯೂ ಕರ್ನಾಟಕಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಪ್ರತಿಪಕ್ಷ ನಾಯಕನ ಆಯ್ಕೆಗೆ ಸಮಯ ನೀಡಿ, ಪ್ರಕ್ರಿಯೆ ಪೂರ್ಣಗೊಳಿಸಿದೆ. ಆದರೆ ಕಳೆದ ಆರು ತಿಂಗಳಿನಿಂದ ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆಗೆ ಕೇಳಿಬರುತ್ತಿದ್ದ ಹತ್ತಾರು ಹೆಸರು, ಜಾತಿ ಲೆಕ್ಕಾಚಾರಗಳಲ್ಲ ಪಕಕ್ಕಿಟ್ಟು, ವಿಜಯೇಂದ್ರ ಅವರಿಗೆ ಈ ಪಟ್ಟವನ್ನು ಬಿಜೆಪಿ ವರಿಷ್ಠರು ಕಟ್ಟಿದ್ದಾರೆ. ಇನ್ನು ಇದೇ ರೀತಿ (ಅಚ್ಚರಿಯೂ ಹೌದು), ಏಳು ಬಾರಿ ಗೆದ್ದಿರುವ ಆರ್. ಅಶೋಕ್ ಅವರಿಗೆ ವಿಧಾನಸಭಾ ಪ್ರತಿಪಕ್ಷ ನಾಯಕನ ಸ್ಥಾನ ನೀಡುವ ಮೂಲಕ ಭಾರಿ ಚರ್ಚೆಗೆ ನಾಂದಿ ಹಾಡಿದೆ.

ವಿಜಯೇಂದ್ರ ಆಯ್ಕೆಯ ವಿಷಯದಲ್ಲಿ ಬಿಜೆಪಿಯಲ್ಲಿ ಕೆಲವೊಂದು ಅಸಮಾಧಾನವಿದ್ದರೂ, ಯಡಿಯೂರಪ್ಪ ಪುತ್ರ, ಪಕ್ಷ ಸಂಘಟನೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿಕೊಂಡಿರುವ ಕಾರಣಕ್ಕೆ ಬಹುತೇಕರು ವರಿಷ್ಠರ ತೀರ್ಮಾನವನ್ನು ಅರಗಿಸಿಕೊಂಡಿದ್ದಾರೆ. ರಾಜಕೀಯ ವಲಯದಲ್ಲಿಯೂ ವಿಜಯೇಂದ್ರ ಅವರ ಆಯ್ಕೆ ಒಂದು 'ರಿಸ್ಕ್' ಎನ್ನುತ್ತಿದ್ದಾರೆಯೇ ಹೊರತು, ಕೆಟ್ಟ ಆಯ್ಕೆ ಎನ್ನುತ್ತಿಲ್ಲ. ಆದರೆ ಬಿಜೆಪಿಯ ಬಹುತೇಕ ನಾಯಕರಲ್ಲಿ, ಶಾಸಕರಲ್ಲಿ ಹಾಗೂ ಕಾರ್ಯಕರ್ತರಲ್ಲಿರುವ ಬಹುದೊಡ್ಡ ಅಸಮಾಧಾನವೆಂದರೆ ಆರ್. ಅಶೋಕ್‌ಗೆ ಪ್ರತಿಪಕ್ಷ ನಾಯಕನ ಸ್ಥಾನ ಕೊಟ್ಟಿರುವುದು. ಬಸನಗೌಡ ಯತ್ನಾಳ್, ವಿಜಯೇಂದ್ರ ಅವರನ್ನು ವಿರೋಧಿಸಲು ಇವರಿಬ್ಬರ ನಡುವಿನ ವೈಯಕ್ತಿಕ ಕಾರಣದ ಹೊರತಾಗಿ ಬೇರೇನಿಲ್ಲ. ಆದರೆ ಅಶೋಕ್ ಅವರ ನೇಮಕದ ಬಗ್ಗೆ ಬಹುತೇಕರು ಪ್ರಶ್ನೆ ಎತ್ತಲು ಹಲವು ಕಾರಣಗಳಿವೆ.

ಈ ಎರಡು ಸ್ಥಾನಗಳಿಗೆ ಇಬ್ಬರನ್ನು ನೇಮಿಸುವ ಹಿಂದೆ ಕ್ಯಾಲಕ್ಯುಲೇಟೆಡ್ ರಿಸ್ಕ್ ಎನ್ನುವುದು ಸ್ಪಷ್ಟ. ವಿಜಯೇಂದ್ರ ಅವರ ನೇಮಕಕ್ಕಿಂತ ಅಶೋಕ್ ಅವರ ನೇಮಕದ ಬಗ್ಗೆ ಇರುವ ಅನುಮಾನಗಳು ಹೆಚ್ಚಿವೆ. ವಿಜಯೇಂದ್ರ ಬಗ್ಗೆ ಹೇಳುವ ಮೊದಲು, ಅಶೋಕ್ ಅವರಿಗೆ ಸಿಕ್ಕಿರುವ ಪ್ರತಿಪಕ್ಷ ನಾಯಕನ ಸ್ಥಾನದ ಬಗ್ಗೆ ಹೇಳುವುದು ಸೂಕ್ತ. ಆರ್. ಅಶೋಕ್ ಎಂದಿಗೂ ತಮ್ಮಲ್ಲಿ 'ಮಾಸ್ ಲೀಡರ್'ಗಿರುವ ಗುಣವಿದೆ ಎಂದು ತಾವೇ ನಂಬಿಲ್ಲ. ಏಳು ಬಾರಿ ಶಾಸಕ, ಒಮ್ಮೆ ಉಪಮುಖ್ಯಮಂತ್ರಿ ಸೇರಿದಂತೆ ಬಿಜೆಪಿ ಸರಕಾರ ಬಂದಾಗಲೆಲ್ಲ ಅಧಿಕಾರದಲ್ಲಿದ್ದಾರೆ. ಆದರೆ ಎಂದಿಗೂ ತಾನೊಬ್ಬ ಒಂದು ಸಮುದಾಯವನ್ನು ಪಕ್ಷದತ್ತ ಸೆಳೆಯುವ ನಾಯಕ ಎನ್ನುವುದನ್ನು ಸಾಬೀತುಪಡಿಸಿಲ್ಲ. ಇದರೊಂದಿಗೆ ಬೆಂಗಳೂರಿಗೆ ಸಾಮ್ರಾಟ್ ಅಶೋಕ್ ಎನ್ನುವ ಮಾತುಗಳನ್ನು ಈ ಹಿಂದೆ ಬಿಜೆಪಿಯಲ್ಲಿ ಹೇಳಲಾಗುತ್ತಿತ್ತು. ಆದರೆ ಬೆಂಗಳೂರನ್ನು ನಿಭಾಯಿಸುವ ವಿಷಯದಲ್ಲಿಯೂ ಅಶೋಕ್ ಸೋತಿದ್ದರು. ಆ ಕಾರಣಕ್ಕಾಗಿಯೇ ಯಡಿಯೂರಪ್ಪ ಅವರ ಎರಡನೇ ಅವಧಿಯಲ್ಲಿ ಒಕ್ಕಲಿಗ ಕೋಟಾದಲ್ಲಿ ಅಶ್ವತ್ಥ ನಾರಾಯಣ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ಸಿಕ್ಕಿತ್ತು.

ಅಶೋಕ್ ಮೇಲಿರುವ ಬಹುದೊಡ್ಡ ಆರೋಪವೆಂದರೆ 'ಹೊಂದಾಣಿಕೆ' ರಾಜಕೀಯ ಎನ್ನುವುದು. ಆಡಳಿತ ಅಥವಾ ಪ್ರತಿಪಕ್ಷದಲ್ಲಿರುವಾಗ ತಮ್ಮ ವಿರೋಧಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಈ ಕಾರಣದಿಂದಲೇ ಬೆಂಗಳೂರು ದಕ್ಷಿಣದಲ್ಲಿ ರಾಜಕೀಯ ಚಿತ್ರಣ ಬಹುದೊಡ್ಡ ಮಟ್ಟದಲ್ಲಿ ಬದಲಾಗುವುದಿಲ್ಲ ಎನ್ನುವುದು ಹಲವು ಬಿಜೆಪಿಗರ ಅಭಿಪ್ರಾಯವಾಗಿದೆ. ಈ ರೀತಿ ಹೊಂದಾಣಿಕೆ ಮಾಡಿಕೊಳ್ಳುವ ಆರೋಪವಿರುವ ಅಶೋಕ್ ಅವರನ್ನು ಪ್ರತಿಪಕ್ಷ ನಾಯಕನನ್ನಾಗಿ ನೇಮಿಸಿದರೆ, ಆಡಳಿತ ಪಕ್ಷವನ್ನು ಯಾವ ರೀತಿ ಎದುರಿಸುತ್ತಾರೆ? ಆಡಳಿತ ಪಕ್ಷದ ಪ್ರತಿಹೆಜ್ಜೆಯಲ್ಲಿಯೂ ಹುಳುಕು ಕಂಡುಹಿಡಿದು, ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕಾದ ನಾಯಕನೇ 'ಅಡ್ಜಸ್ಟ್' ಮಾಡಿಕೊಂಡರೆ ಪಕ್ಷವಾಗಿ ಸದನದೊಳಗೆ ಏನು ಮಾಡಲು ಸಾಧ್ಯ ಎನ್ನುವುದು ಹಲವು ಶಾಸಕರ ಪ್ರಶ್ನೆಯಾಗಿದೆ.

ಪ್ರತಿಪಕ್ಷ ನಾಯಕ ಸ್ಥಾನ ಸಿಕ್ಕಿರುವುದಕ್ಕೆ ತಾನೂ ಈ ಸ್ಥಾನಕ್ಕೆ ಅರ್ಹ ಎನ್ನುವುದನ್ನು ಸಾಬೀತುಪಡಿಸುವುದಕ್ಕೆ ಹೊಂದಾಣಿಕೆಯಿಂದ ಹೊರಬಂದು ನಿರ್ಭೀತಿಯಿಂದ ಸರಕಾರದ ವಿರುದ್ಧ ಹೋರಾಟ ಮಾಡಬಹುದು. ಇಷ್ಟು ದಿನ ಸಿಗದ ಅವಕಾಶ ಈಗ ಸಿಕ್ಕಿರುವುದರಿಂದ ಸಾಬೀತುಪಡಿಸುವ ಸಾಧ್ಯತೆಯಿದೆ ಎನ್ನುವುದು ಕೆಲವರ ಲೆಕ್ಕಾಚಾರ. ಆದರೆ ಅಶೋಕ್ ಅವರಿಗೆ ಇರುವ ಇನ್ನೊಂದು ಸವಾಲು ಎಂದರೆ, ಕಳೆದ ಮೂರು ವರ್ಷದಲ್ಲಿ ಎಂದಿಗೂ ತಾನೊಬ್ಬ ಸಂಸದೀಯ ಪಟುವಾಗಿ ಎಂದು ಕಾಣಿಸಿಕೊಂಡಿಲ್ಲ. ಪ್ರತಿಪಕ್ಷ ನಾಯಕನಿಗೆ ಮೊದಲಿಗೆ ಆಲಿಸುವ, ಆಲಿಸಿದ್ದರಲ್ಲಿ ಆಡಳಿತ ಪಕ್ಷವನ್ನು ವಿರೋಧಿಸುವ ಹಾಗೂ ಸದನದ ನಡವಳಿಗಳ ಬಗ್ಗೆ ಸಂಪೂರ್ಣ ಹಿಡಿತ ಹಾಗೂ ಸರಕಾರವನ್ನು ಕಟ್ಟಿಹಾಕುವ ಸುದೀರ್ಘ ಭಾಷಣದ ಕಲೆಯಿರಬೇಕು. ಆದರೆ ಇಲ್ಲಿಯವರೆಗೆ ಅಶೋಕ್ ಈ ಯಾವ ಲಕ್ಷಣವನ್ನು ಸಚಿವನಾಗಿ, ಶಾಸಕನಾಗಿ ತೋರಿಲ್ಲ ಎನ್ನುವುದೇ ಬಹುದೊಡ್ಡ ಹಿನ್ನಡೆ.

ಇದರೊಂದಿಗೆ ಅಶೋಕ್ ಒಕ್ಕಲಿಗ ನಾಯಕನೆಂದು ಹೇಳಿಕೊಂಡರೂ ಅದನ್ನು ಇಲ್ಲಿಯವರೆಗ ಸಾಬೀತುಪಡಿಸಿಲ್ಲ. ಆದರೆ ಇತ್ತೀಚಿಗೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್ ವರಿಷ್ಠರಾದ ಎಚ್.ಡಿ. ದೇವೇಗೌಡ ಹಾಗೂ ಕುಮಾರಸ್ವಾಮಿ ಅವರೊಂದಿಗೆ ಉತ್ತಮ 'ಹೊಂದಾಣಿಕೆ', ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಇಬ್ಬರನ್ನು 'ಹ್ಯಾಂಡಲ್' ಮಾಡುವ ಕಲೆ ಗೊತ್ತಿದೆ ಎನ್ನುವುದೇ ಬಹುದೊಡ್ಡ 'ಪ್ಲಸ್‌ಪಾಯಿಂಟ್'.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯ ಬಿ.ವೈ. ವಿಜಯೇಂದ್ರ, ಅವರಿಗೆ ಅಶೋಕ್‌ಗೆ ಇರುವಂತೆ ಹೊಂದಾಣಿಕೆ, ವರ್ಚಸ್ಸಿನ ಸಮಸ್ಯೆಯಿಲ್ಲ. ಯಡಿಯೂರಪ್ಪ ಅವರು ರಾಜ್ಯಾಧ್ಯಕ್ಷರಾಗಿ, ಮುಖ್ಯಮಂತ್ರಿಯಾಗಿದ್ದಾಗಲೇ ರಾಜಕೀಯವನ್ನು ಹತ್ತಿರದಿಂದ ಅಧ್ಯಯನ ಮಾಡಿರುವ ವಿಜಯೇಂದ್ರ ಅವರಿಗೆ ಇಲ್ಲಿಯವರೆಗೆ ಪಕ್ಷದ ವರಿಷ್ಠರು ನೀಡಿದ್ದ ಬಹುತೇಕ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿಯೇ ನಿಭಾಯಿಸಿದ್ದರು. ಉಪಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬಂದಿರುವ ಅವರು, ಯಡಿಯೂರಪ್ಪ ಅವರ ಪುತ್ರ ಎನ್ನುವ ಕಾರಣಕ್ಕೋ ಅಥವಾ ಲಿಂಗಾಯತ ಸಮುದಾಯದ ಯುವ ನಾಯಕ ಎನ್ನುವ ಕಾರಣಕ್ಕೋ ಒಂದಷ್ಟು ವರ್ಚಸ್ಸನ್ನು ಗಳಿಸಿಕೊಂಡಿದ್ದಾರೆ.

ವಿಜಯೇಂದ್ರ ಅವರನ್ನು ಈಗಲೇ ಮಾಸ್ ಲೀಡರ್ ಎನ್ನಲು ಸಾಧ್ಯವಿಲ್ಲವಾದರೂ, ರಾಜ್ಯದ ಯಾವುದೇ ಮೂಲೆಗೆ ಹೋದರೂ ನಿರಾಯಾಸವಾಗಿ ಒಂದಿಷ್ಟು ಸಾವಿರ ಜನರನ್ನು ಸೇರಿಸುವ, ಸಂಘಟನೆಯನ್ನು ಗಟ್ಟಿಗೊಳಿಸುವ ಶಕ್ತಿಯನ್ನು ಸಾಬೀತುಪಡಿಸಿದ್ದಾರೆ. ಯಡಿಯೂರಪ್ಪ ಅವರ ನೆರಳಲ್ಲಿಯೇ ಬೆಳೆದಿರುವುದರಿಂದ, ಸಹಜವಾಗಿಯೇ ನೂತನ ಹುದ್ದೆಯ ನಿರ್ವಹಣೆಯಲ್ಲಿ ಯಡಿಯೂರಪ್ಪ ಅವರ ಸುಧೀರ್ಘ ರಾಜಕೀಯ ಅನುಭವವನ್ನು ಬಳಸಿಕೊಳ್ಳುತ್ತಾರೆ. ಇದರೊಂದಿಗೆ ಇಂದಿನ ರಾಜಕಾರಣದಲ್ಲಿ ಅತ್ಯಗತ್ಯವಾಗಿರುವ 'ಫಂಡ್ ರೈಸಿಂಗ್' ವಿಷಯದಲ್ಲಿಯೂ ವಿಜಯೇಂದ್ರ ಅವರಿಗೆ ಅನುಭವವಿದೆ.

ವಿಜಯೇಂದ್ರ ನೇಮಕದ ಹಿಂದೆ ಯಡಿಯೂರಪ್ಪ ಅವರ ಒತ್ತಡವಿರುವುದು ಸ್ಪಷ್ಟ. ವಿಧಾನಸಭಾ ಚುನಾವಣೆಯಲ್ಲಿ ಭಾರಿ ಹಿನ್ನಡೆಗೆ ಪ್ರಮುಖ ಕಾರಣವೆಂದು ಪಕ್ಷದ ವರಿಷ್ಠರಿಗೆ ಅರ್ಥವಾಗಿದೆ. ಯಡಿಯೂರಪ್ಪ ಅವರನ್ನು ಸೈಡ್‌ಲೈನ್ ಮಾಡಿದ್ದರಿಂದ ಲಿಂಗಾಯತರು ವಿಮುಖರಾಗಿದ್ದಾರೆ. ಸಂಘಟನೆ ಹಳಸಿದೆ ಎನ್ನುವುದು ಸ್ಪಷ್ಟವಾಗಿದೆ. ಇನ್ನಾರು ತಿಂಗಳಲ್ಲಿ ಎದುರಾಗಲಿರುವ ಲೋಕಸಭಾ ಚುನಾವಣೆಯಲ್ಲಿ, ಈಗಿರುವ ಬಿಜೆಪಿ ಸಂಘಟನೆಯನ್ನು ಬಳಸಿಕೊಂಡು ಚುನಾವಣೆ ಎದುರಿಸಿದರೆ, 'ಮುಖಭಂಗ'ದ ಆತಂಕವಿರುವುದರಿಂದ ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಪಟ್ಟಕೊಟ್ಟು ಯಡಿಯೂರಪ್ಪ ಅವರನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದು ಹಾಗೂ ಲಿಂಗಾಯತರಿಗೆ ರಾಜ್ಯಾಧ್ಯಕ್ಷ ಹುದ್ದೆ ನೀಡುವ ಮೂಲಕ ಆ ಸಮುದಾಯವನ್ನು ಮತ್ತೆ ಪಕ್ಷದತ್ತ ಸೆಳೆಯುವುದು ಬಿಜೆಪಿ ವರಿಷ್ಠರ ಲೆಕ್ಕಾಚಾರ.

ವಿಜಯೇಂದ್ರ ಅವರ ನೇಮಕದ ಬೆನ್ನಲ್ಲೇ ವಿಧಾನಸಭಾ ಪ್ರತಿಪಕ್ಷ ನಾಯಕನ ಸ್ಥಾನ ಲಿಂಗಾಯತರಿಗೆ ಸಿಗುವುದು ಡೌಟ್ ಎನ್ನುವುದು ಸ್ಪಷ್ಟವಾಗಿತ್ತು. ಒಕ್ಕಲಿಗರಿಗೆ ಈ ಸ್ಥಾನ ನೀಡುವುದು ಖಚಿತವಾಗಿತ್ತು. ಆದರೆ ಯಾರಿಗೆ ಎನ್ನುವ ಗೊಂದಲದಲ್ಲಿರುವಾಗಲೇ ಯಡಿಯೂರಪ್ಪ ಅವರು ಅಶೋಕ್ ಅವರ ಹೆಸರನ್ನು ತೇಲಿಬಿಟ್ಟಿದ್ದಾರೆ. ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋಗುವ ಅಶೋಕ್ ಅವರ ನೇಮಕದಿಂದ ವಿಜಯೇಂದ್ರ ಅವರ ಭವಿಷ್ಯಕ್ಕೆ ಸಮಸ್ಯೆಯಿಲ್ಲ ಎನ್ನುವ ಕಾರಣಕ್ಕೆ ಅಶೋಕ್ ಅವರಿಗೆ 'ಅರಿಯದೇ' ವಿಪಕ್ಷ ಸ್ಥಾನ ಲಭಿಸಿತು ಎನ್ನುವುದು ಸ್ಪಷ್ಟ.

ಯತ್ನಾಳ್, ಅರವಿಂದ ಬೆಲ್ಲದ್ ಅವರು ಅಶೋಕ್ ಅವರ ಆಯ್ಕೆಯನ್ನು ವಿರೋಧಿಸಿದ್ದಕ್ಕಿಂತ ಹೆಚ್ಚಾಗಿ ವಿರೋಧಿಸಿದ್ದು ವಿಜಯೇಂದ್ರ ಅವರ ಆಯ್ಕೆಯನ್ನು. ಏಕೆಂದರೆ, ಅಶೋಕ್ ಅವರನ್ನು ಹ್ಯಾಂಡಲ್ ಮಾಡುವುದು ಸುಲಭ ಎನ್ನುವುದು ಬಿಜೆಪಿಯ ನಾಯಕರಿಗೂ ಗೊತ್ತಿದೆ. ಆದರೆ ವಿಜಯೇಂದ್ರ ಅವರಿಗೆ ಒಮ್ಮೆ ಅವಕಾಶ ಸಿಕ್ಕರೆ, ಮತ್ತೆ ಮುಂದಿನ ಎರಡು ಮೂರು ದಶಕಗಳ ಕಾಲ ಪಕ್ಷದ ಆಯಕಟ್ಟಿನ ಸ್ಥಾನದಲ್ಲಿ ಯಡಿಯೂರಪ್ಪ ಕುಟುಂಬದ ಕೂರುವುದು ಸ್ಪಷ್ಟ. ಅದರಲ್ಲಿಯೂ 'ವರ್ಚಸ್ಸು' ಇರುವುದರಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ಕಾರ್ಯಕರ್ತರನ್ನು ಸೆಳೆಯುತ್ತಾರೆ. ಹಾಗಾದರೆ, ನಮಗೆ ಸಿಗಬೇಕಾದ ಸ್ಥಾನಕ್ಕೆ ಕುತ್ತು ಎನ್ನುವುದು ವಿರೋಧಿಸುತ್ತಿರುವವರ ಲೆಕ್ಕಾಚಾರ. ಈ ಎಲ್ಲ ಸಾಧಕ-ಬಾಧಕದ ಲೆಕ್ಕಾಚಾರದ ಹೊರತಾಗಿ ವಿಜಯೇಂದ್ರ ಹಾಗೂ ಅಶೋಕ್ ಇಬ್ಬರಿಗೂ ಇರುವ ಬಹುದೊಡ್ಡ ಸವಾಲು 'ಮುಳುಗುವ ಹಡಗಿನ' ಸ್ಥಿತಿಯಲ್ಲಿರುವ ರಾಜ್ಯ ಬಿಜೆಪಿ ಮರುಹುಟ್ಟು ಕೊಡುವುದಾಗಿದೆ. ಈ ಕಾರ್ಯವನ್ನು ಈ ಇಬ್ಬರು ಯಾವ ರೀತಿ ನಿಭಾಯಿಸಲಿದ್ದಾರೆ ಎನ್ನುವುದು ಈಗಿರುವ ಬಹುದೊಡ್ಡ ಪ್ರಶ್ನೆ.

ಹಿರಿಯರ ಮನಸ್ಸು ಗೆಲ್ತಾರಾ ವಿಜಯೇಂದ್ರ?

ಪ್ರಚಲಿತ

ಮಣಿಕಂಠ ಹಿರೇಮಠ

vveditoped@gmail.com

ಕೊನೆಗೂ ಕರ್ನಾಟಕದ ಬಿಜೆಪಿ ಕಾರ್ಯಕರ್ತರಿಗೆ ವರಿಷ್ಠರು ದೀಪಾವಳಿಯ ಉಡುಗೊರೆಯೊಂದನ್ನು ಶುಭಸೂಚಕವಾಗಿ ವಿಜಯೇಂದ್ರ, ಯಡಿಯೂರಪ್ಪನವರ ರೂಪದಲ್ಲಿ ನೀಡಿದ್ದಾರೆ. ರಾಜ್ಯ ರಾಜಕೀಯದ ಪಡಸಾಲೆಯಲ್ಲಿ ಬಹುಚರ್ಚಿತ ವಿಷಯವಾಗಿದ್ದ ರಾಜ್ಯಾಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕನ ಹುದ್ದೆಗೆ ಅಂತಿಮವಾಗಿ ಹೈಕಮಾಂಡ್ ಎಲ್ಲ ದೃಷ್ಟಿಕೋನಗಳಿಂದ ಪರಾಮರ್ಶೆ ನಡೆಸಿ ಶಿಕಾರಿಪುರ ಶಾಸಕ ಬಿಜೆಪಿ ಉಪಾಧ್ಯಕ್ಷ ವಿಜಯೇಂದ್ರ ಅವರಿಗೆ ಮುಂಬಡ್ತಿ ನೀಡಿ ಅಧ್ಯಕ್ಷರನ್ನಾಗಿಸಿದೆ.

ರಾಜ್ಯ ಘಟಕದ ಅಧ್ಯಕ್ಷರ ಕುರ್ಚಿಗೆ ಸುಮಾರು ಅರ್ಧ ಡಜನ್‌ಗೂ ಅಧಿಕ ನಾಯಕರು ಟವಲ್ ಹಾಕಿದ್ದರೂ ಯಾವ ಯಾವ ಕಡೆಗಳಿಂದ ತಮ್ಮ ಪರವಾಗಿ ಹೈಕಮಾಂಡ್ ಮಟ್ಟದಲ್ಲಿ ಸುದ್ದಿ ತಲುಪಿಸುವ ಕಾರ್ಯ ಮಾಡಬೇಕು ಮಾಡಿದ್ದರು. ಆದರೆ ಕೊನೆಗೆ ಅಳೆದು ತೂಗಿ ಯಡಿಯೂರಪ್ಪನವರ ಕೃಪಾಕಟಾಕ್ಷವಿಲ್ಲದೆ ಕರ್ನಾಟಕವನ್ನು ಗೆಲ್ಲಲಾಗದು ಎಂದು ವರಿಷ್ಠರಿಗೆ ಮನವರಿಕೆಯಾದ ನಂತರ ಬಿಎಸ್‌ವೈಗೇ ಜೈ ಅಂದಿದ್ದಾರೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತ ಗಳಿಸಿ ಅಧಿಕಾರ ಹಿಡಿದಿದ್ದರೆ ರಾಜ್ಯ ಅಧ್ಯಕ್ಷ ಆಯ್ಕೆ ಕಗ್ಗಂಟಾಗುತ್ತಿರಲಿಲ್ಲ. ಹಿಂದಿನ ಅಧ್ಯಕ್ಷರ ಅವಧಿಯಲ್ಲೇ ಗೆಲುವು ಆಗಿದ್ದರಿಂದ ಅವರನ್ನೇ ಮುಂದುವರಿಸುವ ಸಾಧ್ಯತೆಗಳಿದ್ದವು. ಚುನಾವಣೆಯಲ್ಲಿ ಹಿನ್ನಡೆಯಾದ ನಂತರ ಬಿಜೆಪಿ ಅಕ್ಷರಶಃ ಹಿರಿಯನಿಲ್ಲದ ಮನೆಯಾಗಿತ್ತು. ಹೇಳುವವರು ಕೇಳುವವರು ಇರಲೇ ಇಲ್ಲ. ಅನೇಕ ಮಾಜಿ ಹಾಲಿ ಶಾಸಕರು ಸಂಸದರುಗಳು ಸಾಮೂಹಿಕ ಪಕ್ಷಾಂತರ ಪರೇಡ್ ನಡೆಸಲು ಅಣಿಯಾಗಿದ್ದರು. ಅಂತಹವರನ್ನೆಲ್ಲ ಮಾತನಾಡಿಸಿ ಸಮಸ್ಯೆ ಬಗೆಹರಿಸುವಂತಹ ಕಾರ್ಯವನ್ನು ಮಾಡುವವರು ಯಾರು ಇರಲಿಲ್ಲ. ಈಗ ಅಧಿಕೃತವಾಗಿ ನಾಯಕರೊಬ್ಬರು ಸಿಕ್ಕಂತಾಗಿದೆ.

ವಿಜಯೇಂದ್ರರ ಆಯ್ಕೆಗೆ ಕಾರಣ: ರಾಜ್ಯ ಬಿಜೆಪಿ ಸಾರಥಿಯಾಗಿ ಬಿ.ವೈ.ವಿಜಯೇಂದ್ರ ಆಯ್ಕೆಯಾಗಲು ಹೈಕಮಾಂಡ್ ಮಟ್ಟದಲ್ಲಿ ಯಡಿಯೂರಪ್ಪನವರ ಪ್ರಭಾವ ತುಂಬಾ ಕೆಲಸ ಮಾಡಿದೆ ಎನ್ನುವುದನ್ನು ಎಲ್ಲರೂ ಬಲ್ಲರು. ನಾಲ್ಕು ದಶಕಗಳ ಕಾಲ ತಮ್ಮೊಂದಿಗೆ ಪಕ್ಷಕ್ಕೂ ಅಡ್ರೆಸ್ ಕೊಟ್ಟಂತಹ ಪ್ರಶ್ನಾತೀತ ನಾಯಕ ಯಡಿಯೂರಪ್ಪ. ಅಂತಹ ನಾಯಕನಿಗೆ ಅಗೌರವದ ವಿದಾಯ ಯಾರು ನಿರೀಕ್ಷಿಸಿರಲಿಲ್ಲ. ಪ್ರವಾಹ ಮತ್ತು ಕೋವಿಡ್ ಒದಗಿಬಂದ ಸಂದರ್ಭದಲ್ಲಿ Age Just A Number ಎಂದು ಯುವಕರೇ ನಾಚುವಂತೆ ಕಾರ್ಯನಿರ್ವಹಿಸಿದ್ದ ಅವರನ್ನು ಕೇವಲ ವಯಸ್ಸಿನ ಕಾರಣ ನೀಡಿ ಅಧಿಕಾರದಿಂದ ಕೆಳಗಿಳಿಸಿದಾಗ ಆ ಹಿರಿಯ ಜೀವಕ್ಕೆ ಎಷ್ಟು ನೋವಾಗಿರಬೇಡ. ಬಿಎಸ್‌ವೈ ಕೆಳಗಿಳಿದ ದಿನದಿಂದಲೇ ರಾಜ್ಯ ಬಿಜೆಪಿಯ ಅವನತಿ ಆರಂಭವಾಗಿತ್ತು. ಲಿಂಗಾಯಿತ ಸಮುದಾಯದ ಸ್ವಾಮೀಜಿಗಳ ಆದಿಯಾಗಿ ಅವರ ಬೆಂಬಲಿಗರು ನಿರ್ಧಾರವನ್ನು ಬದಲಿಸುವಂತೆ ಹೈಕಮಾಂಡ್‌ಗೆ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ಇದನ್ನೆಲ್ಲ ಪರಿಗಣಿಸಿದ ವರಿಷ್ಠರು ತೆರವಾಗಿರುವ ಸ್ಥಾನಕ್ಕೆ ಇನ್ನೊಂದು ಸಮುದಾಯದವರನ್ನು ನೇಮಿಸುವ ಬದಲು ಲಿಂಗಾಯತರನ್ನೇ ಮುಖ್ಯಮಂತ್ರಿ ಮಾಡಿದರೆ ಎಲ್ಲ ತಣ್ಣಗಾಗುತ್ತದೆ ಎಂದು ಭಾವಿಸಿ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಗಾದಿಗೇರಿಸಿದ್ದರು. ಆದರೆ ಯಡಿಯೂರಪ್ಪನವರ ಬೆಂಬಲಿಗರು ಬೇರೆಯವರಲ್ಲಿ ತಮ್ಮ ನಾಯಕನನ್ನು ನೋಡಲು ಸಿದ್ಧರಿರಲಿಲ್ಲ. ಬೊಮ್ಮಾಯಿ ಅವರ ಸಂಪುಟ ರಚನೆ ಸಂದರ್ಭದಲ್ಲಿ ವಿಜಯೇಂದ್ರರನ್ನಾದರು ಮಂತ್ರಿ ಮಾಡುತ್ತಾರೆ ಅಂದುಕೊಂಡಿದ್ದರು. ಆದರೆ ಅವರಿಗಾಗದವರು ವರಿಷ್ಠರ ಕಿವಿ ಚುಚ್ಚಿದ್ದರಿಂದ ಇವರನ್ನು ಮಂತ್ರಿ ಮಾಡಬಾರದೆಂದು ಸಂಪುಟ ವಿಸ್ತರಣೆಯನ್ನೂ ಮಾಡದೆ ನಾಲ್ಕೈದು ಸ್ಥಾನವನ್ನು ಖಾಲಿ ಇಡಬೇಕಾಯಿತು. ಅಂತಿಮವಾಗಿ ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ ರಾಜ್ಯದ ಜನತೆ 2023ರ ವಿಧಾನಸಭಾ ಚುನಾವಣೆಯಲ್ಲಿ ಪ್ರತ್ಯುತ್ತರ ನೀಡಿದ್ದು ಈಗ ಇತಿಹಾಸ.

ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿದ್ದು ಆಡಳಿತರೂಢ ಕಾಂಗ್ರೆಸ್‌ಗೆ ನುಂಗಲಾರದ ತುತ್ತಾಗಿದೆ. ಆರು ತಿಂಗಳಿನಿಂದ ವಿಪಕ್ಷ ನಾಯಕರಿಲ್ಲ, ರಾಜ್ಯಾಧ್ಯಕ್ಷರಿಲ್ಲ ಎಂಬ ಹೇಳಿಕೆ ನೀಡುತ್ತಾ ಜನರ ಗಮನವನ್ನು ತಮ್ಮತ್ತ ಸೆಳೆಯುವ ತಂತ್ರವನ್ನು ಅನುಸರಿಸಿತ್ತು ಕಾಂಗ್ರೆಸ್. ಅಷ್ಟೇ ಅಲ್ಲದೆ ಬಿಜೆಪಿ ಯಡಿಯೂರಪ್ಪನವರನ್ನು ನಿರ್ಲಕ್ಷ್ಯ ಮಾಡುವ ಮೂಲಕ ಲಿಂಗಾಯತರಿಗೆ ಅನ್ಯಾಯ ಮಾಡಿದೆ ಎಂಬ ಖ್ಯಬ್ಲಿಥ ಸೃಷ್ಟಿಸಿತ್ತು ಈಗ ಅದಕ್ಕೆಲ್ಲ ಫುಲ್ ಸ್ಟಾಪ್ ಬಿದ್ದಿದೆ.

ಯಡಿಯೂರಪ್ಪನವರ ಮಗ ಎಂಬ ಕಾರಣಕ್ಕೆ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ ಎಂದು ಕಾಂಗ್ರೆಸ್ಸಿಗರು ಟೀಕೆ ಮಾಡುತಿದ್ದಾರೆ. ಆದರೆ ವಿದ್ಯಾರ್ಥಿ ದೆಸೆಯಿಂದಲೇ ಎಬಿವಿಪಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮುಂದೆ ರಾಜ್ಯ ಯುವ ಮೋರ್ಚಾ ಅಧ್ಯಕ್ಷರಾಗಿ, ರಾಜ್ಯ ಘಟಕದ ಉಪಾಧ್ಯಕ್ಷ ಕಾರ್ಯನಿರ್ವಹಿಸಿದ್ದಲ್ಲದೆ ಪಕ್ಷ ಗೆಲ್ಲಲು ಸಾಧ್ಯವೇ ಇಲ್ಲ ಎಂದುಕೊಂಡಿದ್ದ ಕೆ.ಆರ್.ಪೇಟೆ ಮತ್ತು ಶಿರಾ ಉಪಚುನಾವಣೆ ನೇತೃತ್ವ ವಹಿಸಿಕೊಂಡು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬಂದು ತಮ್ಮ ಸಾಮರ್ಥ್ಯ ನಿರೂಪಿಸಿದ್ದಾರೆ. ಬೀದರ್‌ನಿಂದ ಚಾಮರಾಜನಗರದವರೆಗೆ ವಿಜಯೇಂದ್ರರ ಬಗ್ಗೆ ಯುವ ಸಮುದಾಯದಲ್ಲಿ ಒಂದು ಸೆಳೆತವಿದೆ. ಹಿರಿಯ ಕಾರ್ಯಕರ್ತರು ಇವರಲ್ಲಿ ಯಡಿಯೂರಪ್ಪನವರನ್ನು ನೋಡುತ್ತಾರೆ. ಕ್ರೀಡಾಪಟುವಿನ ಮಗ ತನ್ನದ ಆಟದ ಮೂಲಕ ಕ್ರೀಡಾಪಟುವಾಗುತ್ತಾನೆ, ಕಲಾವಿದನ ಮಗ ತನ್ನ ಅಭಿನಯದ ಮೂಲಕ ಕಲಾವಿದನಾಗುತ್ತಾನೆ. ತಮ್ಮ ಸಂಘಟನಾ ಚಾತುರ್ಯದ ಮೂಲಕ ವಿಜಯೇಂದ್ರ ರಾಜ್ಯಾಧ್ಯಕ್ಷರಾದರೆ ತಪ್ಪೇನು?

ಜೆಡಿಎಸ್ ಬಿಜೆಪಿ ಮೈತ್ರಿ: ರಾಜ್ಯಾಧ್ಯಕ್ಷರ ಹುದ್ದೆಗೆ ಒಕ್ಕಲಿಗ ನಾಯಕರುಗಳಾದ ಶೋಭಾ ಕರಂದ್ಲಾಜೆ ಮತ್ತು ಸಿಟಿ ರವಿ ಹೆಸರು ಬಲವಾಗಿ ಕೇಳಿಬಂದಿತ್ತು. ಹೈಕಮಾಂಡ್ ಮಟ್ಟದಲ್ಲಿಯೂ ಈ ಹೆಸರುಗಳಿಗೆ ಒಪ್ಪಿಗೆ ಇತ್ತು. ಆದರೆ ಚುನಾವಣೆಯಲ್ಲಿ ನೀಡಿದ ಹೇಳಿಕೆಗಳು ಸಿ.ಟಿ.ರವಿ ಅವರಿಗೆ ದುಬಾರಿಯಾದರೆ ಶೋಭಾ ಕರಂದ್ಲಾಜೆ ಅವರು ಸ್ವತಃ ಆಸಕ್ತಿ ತೋರದ ಕಾರಣ ಮತ್ತು ಮಹಿಳೆಯೊಬ್ಬರು ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ರಾಜ್ಯವನ್ನೆಲ್ಲ ಸುತ್ತಿ ಪಕ್ಷ ಸಂಘಟಿಸುವುದು ಕಷ್ಟವಾಗುವುದೆಂದು ಪರಿಗಣಿಸಿ ಈ ಆಯ್ಕೆ ಮಾಡಲಾಯಿತು. ಜೆಡಿಎಸ್ ಕೂಡ ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವುದರಿಂದ ಒಕ್ಕಲಿಗ ಮತಗಳ ವಿಷಯವಾಗಿ ಬಿಜೆಪಿ ಸ್ವಲ್ಪ ನಿಟ್ಟುಸಿರು ಬಿಡಬಹುದು. ಯಡಿಯೂರಪ್ಪನವರನ್ನು ದೂರವಿಟ್ಟು ಈ ಮೈತ್ರಿ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದು ಕುಮಾರಸ್ವಾಮಿ ಅವರಿಗೂ ಮನವರಿಕೆಯಾಗಿರುವುದರಿಂದ ಬಿಜೆಪಿಯ ನೂತನ ರಾಜ್ಯಾಧ್ಯಕ್ಷರ ಆಯ್ಕೆಯ ಬಗ್ಗೆ ಅವರಿಗೂ ಸಂತಸವಿದೆ.

ಮುಂದಿರುವ ಸವಾಲುಗಳು: ರಾಜ್ಯದಲ್ಲಿ ಪಕ್ಷದ ಚುಕ್ಕಾಣಿಯನ್ನೇನೋ ವಿಜಯೇಂದ್ರ ಹಿಡಿದಿದ್ದಾರೆ. ಆದರೆ ಸ್ವಾಗತಕ್ಕೆ ಹೂವಿನ ಬದಲು ಮುಳ್ಳುಗಳೇ ಸಿದ್ಧವಾಗಿವೆ. ಅಧ್ಯಕ್ಷ ಹುದ್ದೆಯ ಆಕಾಂಕ್ಷಿಗಳಾಗಿದ್ದ ಅನೇಕರು ಅಸಮಾಧಾನದ ಮಾತುಗಳನಾಡುತ್ತಿದ್ದಾರೆ. ಹಿರಿಯರನ್ನೆಲ್ಲ ದೂರವಿಟ್ಟು ಯುವಕನನ್ನು ಆಯ್ಕೆ ಮಾಡಿರುವುದರಿಂದ ಇವರ ಕೈ ಕೆಳಗೆ ಕೆಲಸ ಮಾಡುವುದು ಹೇಗೆ ಎನ್ನುವ ಭಾವನೆ ಸಹಜ. ಆದರೆ ಎರಡನೇ ಹಂತದ ನಾಯಕತ್ವ ರೂಪಿಸುವ ನಿಟ್ಟಿನಲ್ಲಿ ಇದು ಪಕ್ಷಕ್ಕೂ ಅನಿವಾರ್ಯ. ಹೀಗಾಗಿ ಅಂಥವರನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡು ಮಾರ್ಗದರ್ಶನ ಪಡೆದುಕೊಳ್ಳಬೇಕಿದೆ.

ಇನ್ನು ಕೆಲವೇ ತಿಂಗಳಲ್ಲಿ ಲೋಕಸಭಾ ಚುನಾವಣೆ ಎದುರಾಗುವುದರಿಂದ ಪಕ್ಷ ಬಿಡಲು ತುದಿಗಾಲ ಮೇಲೆ ನಿಂತಿರುವವರನ್ನು ಸಮಾಧಾನಪಡಿ ಸುವ ಕಾರ್ಯ ತುರ್ತಾಗಿ ಆಗಬೇಕಿದೆ. ವಿಧಾನಸಭಾ ಚುನಾವಣೆಯಲ್ಲಿ ಮುಗ್ಗರಿಸಿ ರುವ ಬಿಜೆಪಿಗೆ ಚೈತನ್ಯ ತುಂಬಿ ಕಾರ್ಯಕರ್ತರನ್ನು ಸಿದ್ಧಗೊಳಿಸುವುದಿದೆ. 28 ಲೋಕ ಸಭಾ ಕ್ಷೇತ್ರಗಳಲ್ಲಿ ಈಗಾಗಲೇ 25 ಜನ ಬಿಜೆಪಿ ಸಂಸದರಿದ್ದಾರೆ. ಈ ಸಲದ ಚುನಾವಣೆಯಲ್ಲಿ ಕನಿಷ್ಠವೆಂದರು 20 ಸ್ಥಾನವನ್ನಾದರೂ ಗೆದ್ದು ತಮ್ಮ ಮೊದಲ ಪರೀಕ್ಷೆಯಲ್ಲಿ ಯಶಸ್ವಿಯಾಗಿ ತಮ್ಮ ಸಂಘಟನಾ ಶಕ್ತಿಯನ್ನು ರುಜುವಾತು ಮಾಡುವ ಅನಿವಾರ್ಯತೆ ಇದೆ. ಯಡಿ ಯೂರಪ್ಪನವರ ಸಂಪೂರ್ಣ ಬೆಂಬಲ ತಮ್ಮ ಪುತ್ರನಿಗೆ ಸಿಗುವುದರಿಂದ ಹಾಗೂ ಮೋದಿ ನಾಮ ಬಲವಿರುವುದರಿಂದ ಇದೇನು ಕಷ್ಟ ವಾಗದು. ಇದರಲ್ಲಿ ಯಶಸ್ವಿ ಆದಲ್ಲಿ ದೊಡ್ಡ ನಾಯಕನಾಗಿ ಬೆಳೆಯುವುದು ಅಷ್ಟೇ ಅಲ್ಲದೆ ಅಪ್ಪನಂತೆ ಮಗ ಕೂಡ ಮುಂದಿನ ಹತ್ತು ವರ್ಷಗಳಲ್ಲಿ ಮುಖ್ಯಮಂತ್ರಿ ರೇಸ್‌ನಲ್ಲಿ ಕಾಣಬಹುದು.

ಹಿರಿಯ ನಾಯಕರುಗಳೇ ಹೆಮ್ಮೆ ಪಡುವಂತಹ ಕಾರ್ಯಗಳನ್ನು ವಿಜಯೇಂದ್ರ ಅಧ್ಯಕ್ಷರಾದ ಕ್ಷಣಗಳಿಂದಲೇ ಆರಂಭಿಸಿದ್ದಾರೆ ಬೂತ್ ಅಧ್ಯಕ್ಷರ ಮನೆಗೆ ತೆರಳಿ ಕಾರ್ಯಕರ್ತರ ಪ್ರಾಮುಖ್ಯತೆಯ ಪಾಠ ಮಾಡಿದ್ದ ಅವರು ನಂತರದಲ್ಲಿ ಅಸಮಧಾನಗೊಂಡಿದ್ದರನ್ನೆಲ್ಲಾದ ಸಿ.ಟಿ.ರವಿ ಅವರ ಮನೆಗೆ ಭೇಟಿ ನೀಡಿ ಸಂಘಟನೆಯ ಬಗ್ಗೆ ಯಡಿಯೂರಪ್ಪನವರ ಮಗನಿಗೆ ಏನು ಕಲಿಸೋಕಿಲ್ಲ ಎಂದು ನಿರೂಪಿಸಿದ್ದಾರೆ. ಅತೃಪ್ತಿ ಏನೇ ಇರಲಿ ಎಲ್ಲರೂ ಸೇರಿ ಪಕ್ಷ ಸಂಘಟಿಸಿದರೆ ಲೋಕಸಭಾ ಚುನಾವಣೆಯಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತದೆ. ಪಕ್ಷಕ್ಕಿಂತ ಸ್ವಹಿತಾಸಕ್ತಿಯೇ ಮುಖ್ಯವಾದರೆ ವಿಧಾನಸಭಾ ಚುನಾವಣೆಯ ಫಲಿತಾಂಶ ಪುನರಾವರ್ತನೆ ನಿಶ್ಚಿತ.

(ಪತ್ರಿಕೋದ್ಯಮ ವಿದ್ಯಾರ್ಥಿ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಿಲುಕದ ನಕ್ಷತ್ರವಾದ ವಿಶ್ವಕಪ್

ಯಾವುದೇ ಕಾರ್ಯವನ್ನು ಸಾಧಿಸಬೇಕಾದರೆ ಇಚ್ಛಾಶಕ್ತಿಯ ಅವಶ್ಯಕತೆ ಹೆಚ್ಚಾಗಿರುತ್ತದೆ. ಇತ್ತೀಚೆಗೆ ಮುಕ್ತಾಯವಾದ ಕ್ರಿಕೆಟ್ ವಿಶ್ವಕಪ್ 2023ರ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ಸೋತಿರು ವುದು ನಿರ್ಣಾಯಕ ಪಂದ್ಯಗಳಲ್ಲಿ ಭಾರತ ಕ್ರಿಕೆಟ್ ತಂಡ ಸೋಲುವ ಪರಂಪರೆಯನ್ನು ಮುಂದುವರಿಸಿದಂತಾ ಗಿದೆ. ಇದರ ಪ್ರಾರಂಭ 2000ನೇ ಸಾಲಿನ ಚಾಂಪಿಯನ್ ಟ್ರೋಫಿ ಫೈನಲ್ 2003ರ ವಿಶ್ವಕಪ್ ಫೈನಲ್, 2015 ವಿಶ್ವಕಪ್ ಸೆಮಿ ಫೈನಲ್, 2017ರ ಚಾಂಪಿಯನ್ ಟ್ರೋಫಿ ಫೈನಲ್, 2020 ಮತ್ತು 2022 ವಿಶ್ವ ಟೆಸ್ಟ್ ಚಾಂಪಿಯನ್ ಟ್ರೋಫಿ ಫೈನಲ್ ಹೀಗೆ ನಿರ್ಣಾಯಕ ಪಂದ್ಯಗಳಲ್ಲಿ ಆತ್ಮವಿಶ್ವಾಸದ ಕೊರತೆ ಮತ್ತು ಸನ್ನಿವೇಶ ತಕ್ಕಂತೆ ಆಟ ಪ್ರದರ್ಶನ ಮಾಡದೆಯಿ ರುವುದು ಸೋಲಿಗೆ ಮುಖ್ಯಕಾರಣವಾಗಿದೆ. ಸತತ ಸೋಲು ಗಳಿಂದ ಪಾಠ ಕಲಿಯದ ಭಾರತ ಕ್ರಿಕೆಟ್ ತಂಡ ಫೈನಲ್ ಪಂದ್ಯಗಳನ್ನು ಗೆಲ್ಲುವ ಕಲೆಯನ್ನು ಕಲಿಯಬೇಕಾಗಿದೆ. ಇತ್ತೀಚಿನ ಫೈನಲ್ ಪಂದ್ಯದಲ್ಲಿ ಟಾಸ್ ಮುಖ್ಯ ಪಾತ್ರ ವಹಿಸಿದೆ. ಮೊದಲು ಫೀಲ್ಡ್ ಮಾಡಿದ ಆಸ್ಟ್ರೇಲಿಯಾ ತಂಡದ ಬೌಲರ್‌ಗಳಿಗೆ ಪಿಚ್‌ನಿಂದ ಉತ್ತಮ ಸಹಕಾರ ದೊರೆಯಿತು ಮತ್ತು ಕ್ಷೇತ್ರ ರಕ್ಷಣೆಯಲ್ಲಿ ಆಸ್ಟ್ರೇಲಿಯಾ ಆಟಗಾರರಿಗೆ ಅವರೇ ಸರಿಸಾಟಿ. ಭಾರತ ಹಲವಾರು ಶ್ರೇಷ್ಠ ಬ್ಯಾಟ್ಸ್‌ಮನ್‌ಗಳನ್ನು ಹೊಂದಿದ್ದರು. ನಿನ್ನೆಯ ಫೈನಲ್ ಪಂದ್ಯದಲ್ಲಿ ಮುನ್ನುಗ್ಗುವ ಮನೋಭಾವನೆಯನ್ನು ಪ್ರದರ್ಶಿಸುವಲ್ಲಿ ವಿಫಲವಾದರು. ರೋಹಿತ್ ಶರ್ಮಾರ ಧೈರ್ಯದ ಆಟ ಬೇರೆ ಆಟಗಾರರಿಗೆ ಪಾಠವಾಗಬೇಕಿತ್ತು. ಆದರೆ ಬ್ಯಾಟಿಂಗ್ ಮರತೆವರಂತೆ ಆಡಿದ ಭಾರತೀಯ ಕ್ರಿಕೆಟ್ ತಂಡಕ್ಕೆ ವಿಶ್ವಕಪ್ ಒಂದು ಕನಸಾಯಿತು. ಭಾರತ ಕ್ರಿಕೆಟ್ ತಂಡ ವಿಶ್ವಕಪ್ ಸೋತಿದ್ದು ಆತ್ಮಾವಲೋಕನದ ಅವಶ್ಯಕತೆಯಿದೆ. ಸೋತರೂ ಭಾರತೀಯ ತಂಡಕ್ಕೆ ಭಾರತೀಯರ ಪರವಾಗಿ ಅಭಿನಂದನೆಗಳು. ಏಕೆಂದರೆ ಫೈನಲ್ ಪ್ರವೇಶಿಸಿರುವುದು ಹೆಮ್ಮೆಯ ಸಂಗತಿ.

- ರಾಸುಮ ಭಟ್, ಚಿಕ್ಕಮಗಳೂರು

ಮೊಬೈಲ್ ಕೊಡುವ ಮುನ್ನ ಹುಷಾರ್

ಬಾಲ್ಯ ಎನ್ನುವುದು ಬೃಹತ್ ಮರದ ಗಟ್ಟಿಯಾದ ಬೇರು. ಅದಕ್ಕೆ ನೀರು ಹಾಗೂ ಉತ್ತಮವಾದ ಗೊಬ್ಬರ ಹಾಕಿ ಬೆಳೆಸಿದಷ್ಟೆ ಫಲವತ್ತತೆ ನೀಡುವುದು. ಅದರಂತೇ ಇಂದಿನ ಮಕ್ಕಳ ಭವಿಷ್ಯವಿರುವುದು. ಇಂದಿನ ಮಕ್ಕಳು ದೇಶದ ಮುಂದಿನ ಪ್ರಜೆಗಳು, ದೇಶವನ್ನಾಳ ಬೇಕಾದವರಿಗೆ ಉತ್ತಮವಾದ ಶಿಕ್ಷಣ, ಸಂಸ್ಕೃತಿ ದೊರೆ ಯುತ್ತಿಲ್ಲ. ಹಗಲು ರಾತ್ರಿ ಎನ್ನದೆ ಮೊಬೈಲ್ ಎಂಬ ಮಾಯಾ ಜಾಲದಲ್ಲಿ ಕಾಲ ಕಳೆಯುವಂತಾಗಿದೆ ಮಕ್ಕಳ ಜೀವನ. ಮಕ್ಕಳ ಕೈಗೆ ಮೊಬೈಲ್ ನೀಡುವ ಪಾಲಕರು ಕೊಂಚ ಯೋಚಿಸಿ. ಅತಿಯಾದರೆ ಅಮೃತವು ವಿಷದಂತೆ ಎನ್ನುವುದಕ್ಕೆ ಉದಾ ಹರಣೆ ಎಂದರೆ ಅದು ಮೊಬೈಲ್. ಇತ್ತೀಚೆಗಷ್ಟೇ ನಡೆದ ಸಂಶೋಧನೆಯಲ್ಲಿ ಶೇ. 50ರಷ್ಟು ಮಕ್ಕಳಿಗೆ ದೃಷ್ಟಿದೋಷ ಕಂಡುಬಂದಿದೆ. ಇದಕ್ಕೆ ಕಾರಣ ಅತಿಯಾಗಿ ಮೊಬೈಲ್ ಬಳಕೆ ಮತ್ತು ಟಿವಿ ಆಕರ್ಷಣೆ ಎಂದು ತಿಳಿದಿರುವುದು ನಿಜಕ್ಕೂ ವಿಷಾದನಿಯ ಸಂಗತಿ. ಪಾಲಕರು ಇಂದೇ ಎಚ್ಚೆತ್ತುಕೊಳ್ಳಿ. ಇಲ್ಲವಾದಲ್ಲಿ ಮುಂದೊಂದು ದಿನ ಇದಕ್ಕೆ ದಂಡತೆಯಬೇಕಾಗುತ್ತೆ.

-ಲಕ್ಷ್ಮಿ, ಬಾಗಲಕೋಟೆ

ಬಾಯಿಗೆ ಬಂದಂತೆ ಮಾತಾಡ್ಬೇಡಿ

ವಿಶ್ವಕಪ್ ಕ್ರಿಕೆಟ್ ಸೋಲಲು ಮೀಸಲಾತಿ ಇಲ್ಲದೇ ಇದ್ದದ್ದು, ಮೀಸಲಾತಿ ಇದ್ದಿದ್ದರೇ ಭಾರತ ಆರಾಮವಾಗಿ ಗೆಲ್ಲುತ್ತಿತ್ತು ಎನ್ನುವ ಹೇಳಿಕೆ ಕೊಟ್ಟ ನಟ ಚೇತನ್ ಹೇಳಿಕೆ ದುರದೃಷ್ಟಕರ. ಭಾರತ ಆಡಿದ 10 ಪಂದ್ಯಗಳನ್ನು ಲೀಲಾಜಾಲವಾಗಿ ಗೆದ್ದುಕೊಂಡು ಬಂದಾಗ ಮಾತನಾಡದೆ ಈಗ ಟೀಕಿಸುವುದು ನೋಡಿದರೆ ಇವರಿಗೆಲ್ಲ ಜ್ಞಾನದ ಅಭಾವ ಇದೆ ಎನಿಸುತ್ತದೆ. ಮೀಸಲಾತಿಗೂ ಆಟಕ್ಕೂ ಏನೂ ಸಂಬಂಧ? ಕ್ರೀಡೆ ಎನ್ನುವುದು ನೆನಪಿರಲಿ- ಇಲ್ಲಿ ಪರಿಶ್ರಮ ಆಟದ ಕೌಶಲ, ಪ್ರತಿಭೆ ಅಷ್ಟನ್ನೇ ಗುರುತಿಸಲಾಗುತ್ತದೆ. ಜಾತಿಯನ್ನು ನೋಡಲಾಗುವುದಿಲ್ಲ. ಕಾರ್ಪೋರೇಟ್ ಸಂಸ್ಥೆಗಳು ಕೌಶಲ ಪ್ರತಿಭೆ ನೋಡಿ ಮಾತ್ರ ಕೆಲಸ ಕೊಡುತ್ತವೆ. ಅದೇ ರೀತಿ ಆಟಗಾರರನ್ನು ಆಯ್ಕೆ ಮಾಡಲು ಜಾತಿ ಮಾನದಂಡವಲ್ಲ. ನಟ ಎಂದ ಮಾತ್ರಕ್ಕೆ ನೀವು ಬಾಯಿಗೆ ಬಂದ ಹಾಗೆ ಮಾತನಾಡುವುದು ಶೋಭೆ ತರುವ ವಿಚಾರವಲ್ಲ. ಇದು ಆಟ, ಸೋಲು ಗೆಲುವು ಎರಡನ್ನೂ ಸಮಾನವಾಗಿ ಸ್ವೀಕರಿಸುವ ಗುಣ ಬೆಳೆಸಿಕೊಳ್ಳಿ. ಟೀಕೆ ಮಾಡಬೇಕೆಂದಿದ್ದರೆ ಸಕಾರಣ ಕೊಟ್ಟು ಟೀಕಿಸಿ. ಇಲ್ಲದಿದ್ದರೆ ನಿಮ್ಮ ಈ ಮಾತುಗಳು ಆಟಗಾರರ ಮನ ನೋಯಿಸುತ್ತವೆ.

-ಎಂ ಪರಮೇಶ್ವರ, ಮದ್ದಿಹಳ್ಳಿ

ಎತ್ತ ಸಾಗುತ್ತಿದೆ ಭಾರತ?

ಲೋಕೋಪಯೋಗಿ ಇಲಾಖೆಯ ಪ್ರಥಮ ದರ್ಜೆ ಸಹಾಯಕನಿಗೆ ಕರೆಮಾಡಿ 10 ಸಾವಿರ ಪಡೆದು ಕೆಲಸ ಮಾಡಿಕೊಡಿ ಎಂದು ಶಾಸಕ ಶರಣು ಸಲಗರ ಕೇಳಿರುವ ಆಡಿಯೋ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ವರದಿಯಾಗಿದೆ. ಇದನ್ನು ಪ್ರಶ್ನಿಸಿದ ಮಾಧ್ಯಮದವರಿಗೆ 'ಒಂದು ಕೆಲಸಕ್ಕಾಗಿ ಬಡಕುಟುಂಬದ ಕಾರ್ಯಕರ್ತನಿಂದ 40 ಸಾವಿರ ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಅದನ್ನು 10 ಸಾವಿರ ಪಡೆದು ಕೆಲಸ ಮಾಡಿಕೊಡಿ ಎಂದು ಕೇಳಿಕೊಂಡಿದ್ದೇನೆ. ಕೆಲಸ ಆಗಲಿ ಎಂಬ ಸದುದ್ದೇಶ ನನ್ನದಾಗಿತ್ತು. ಇದರಲ್ಲಿ ತಪ್ಪೇನಿದೆ?' ಎಂದು ಹೇಳಿದ್ದಾರೆ. ಅಲ್ಲಿಗೆ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದ ಭಗತ್ ಸಿಂಗ್, ರಾಯಣ್ಣ, ಸುಭಾಷ್‌ಚಂದ್ರ ಬೋಸ್, ತಿಲಕ್, ಗಾಂಧೀಜಿ, ಪಟೇಲ್, ಸಾವರ್ಕರ್ ಮುಂತಾದ ಮಹನೀಯರ ಆತ್ಮಕ್ಕೆ ಶಾಂತಿ ದೊರಕಿದಂತಾಯಿತು. ಇಲ್ಲಿಗೆ ಬಂದು ನಿಂತಿದೆ ನಮ್ಮ ಆಡಳಿತ. ಹಿರಿಯರೊಬ್ಬರು ಒಮ್ಮೆ ಹೇಳಿದ್ದರು 'ಸ್ವಾತಂತ್ರ ಇರಲಿಲ್ಲ ಅನ್ನೋದು ಬಿಟ್ಟರೆ ಬ್ರಿಟಿಷರ ಕಾಲವೇ ಚೆಂದಿತ್ತು' ಅಂತ. ಈಗ ಅದು ನಿಜವೇನೋ ಅಂತ ಅನ್ನಿಸುತ್ತದೆ. ಒಬ್ಬ ಶಾಸಕರೇ ಬಹಿರಂಗವಾಗಿ ಲಂಚಕ್ಕೆ ಪ್ರೇರೇಪಿಸುತ್ತಾರೆ ಎಂದರೆ ಅದು ನಾಚಿಕೆಗೇಡು. ಇದನ್ನೇ ಆಧಾರವನ್ನಾಗಿ ಪರಿಗಣಿಸಿ ಸದರಿ ಶಾಸಕರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಉಚ್ಚಾಟಿಸಲಿ. ಇಲ್ಲವಾದರೆ ಭವಿಷ್ಯದಲ್ಲಿ ಲಂಚವೂ ಸಹ ಅಧಿಕೃತವಾದೀತು.

- ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅನನುಕೂಲತೆ ಸರಿಪಡಿಸಿ

ಎರಡು ಸಾವಿರ ನೋಟುಗಳನ್ನು ಹಿಂಪಡೆಯುವ ನಿರ್ಧಾರದ ಬಳಿಕ, ವಾಣಿಜ್ಯ ಬ್ಯಾಂಕುಗಳಲ್ಲಿ ಮೊದಲು ವಿನಿಮಯ ಮಾಡುವ ಸೌಲಭ್ಯವಿದ್ದರೂ ಈಗ ಭಾರತೀಯ ರಿಸರ್ವ್ ಬ್ಯಾಂಕಿಗೇ ಹೋಗಬೇಕಾದ ಪರಿಸ್ಥಿತಿಯಿದೆ. ಅಲ್ಲಿ ಇಷ್ಟುದ್ದ ಸರತಿ ಸಾಲು, ಕುಳಿತುಕೊಳ್ಳಲು ಕುರ್ಚಿ ವ್ಯವಸ್ಥೆಯಿದ್ದರೂ ಅದು ಏನೂ ಸಾಕಾಗುವುದಿಲ್ಲ. ಕನಿಷ್ಠ ಮೂರು ನಾಲ್ಕು ಘಂಟೆಗಳಾದರೂ ಕಾಯಬೇಕಾಗುತ್ತದೆ ಎಂದು ಅಲ್ಲಿದ್ದ ಕಾವಲುಗಾರರ ಅಭಿಪ್ರಾಯ. ಗೇಟಿನ ಮುಂದೆಯೇ, ರಿಸರ್ವ್ ಬ್ಯಾಂಕಿನ ಮೂಗಿನ ಕೆಳಗೇ ಕೆಲವರು ಹಣದ ಚೀಲ ಹಿಡಿದುಕೊಂಡು ಒಂದು ನೋಟಿಗೆ ಇನ್ನೂರು ರೂಪಾಯಿ ಕಮಿಷನ್ ನಂತೆ ರಾಜಾರೋಷವಾಗಿ ವಿನಿಮಯ ಮಾಡುವುದೂ ಕಂಡು ಬಂತು. ನೀರು, ತಿಂಡಿ, ಊಟ ಬಿಟ್ಟು ಘಂಟೆಗಟ್ಟಲೆ ಕಾಯುವ ಉಸಾಬರಿಗಿಂತ ಸಿಕ್ಕಿದಷ್ಟು ಸಾಕೆಂದು ಮಹಿಳೆಯರು, ವೃದ್ಧರು ಅಂಥವರ ಬಳಿ ನೋಟನ್ನು ಬದಲಿಸಿಕೊಳ್ಳುತ್ತಿದ್ದರು. ಇಂಥವರೇ ಬಹು ಪಾಲು ಜನ ಅಲ್ಲಿರುವ ಸರತಿ ಸಾಲಿನಲ್ಲಿ ಇದ್ದಿರಲೂ ಬಹುದು. ಜನ ಸಾಮಾನ್ಯರಿಗೆ ಈ ರೀತಿಯ ಅನಾನುಕೂಲತೆ ಮಾಡುವುದನ್ನು ಬಿಟ್ಟು ಮತ್ತೆ ಕೆಲವು ತಿಂಗಳುಗಳ ಮಟ್ಟಿಗೆ ಎಲ್ಲ ಬ್ಯಾಂಕುಗಳಲ್ಲೂ ನೋಟು ವಿನಿಮಯ ಮಾಡಲು ಅವಕಾಶ ಮಾಡಿಕೊಡುವುದು ಉತ್ತಮ.

- ಬಿ. ಎನ್. ಭರತ್, ಬೆಂಗಳೂರು